CW-04
PW-03

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ.ಎಸ್.ಟಿ.) ಸಂಖ್ಯೆ 04/2022

ದಿ. 18-09-2025

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-04
ಫ್ರಾಸಾ-03

| | |
|---|---|
| ಸಾಕ್ಷಿದಾರರ ಹೆಸರು | ಉದಯ |
| ತಂದೆಯ ಹೆಸರು | ಬಸವರಾಜ |
| ವಯಸ್ಸು | 24 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮಾಚನೂರು |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನನಗೆ ಚಾಸಾ-1 ರಿಂದ 3 ಮತ್ತು 5 ಗೊತ್ತು.

2. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತನು ಸಹ ನನಗೆ ಗೊತ್ತು.

3. ಸನ್ 2021 ರಲ್ಲಿ ಒಂದು ದಿನ ಸಾಯಂಕಾಲ ಸುಮಾರು 07-08 ಗಂಟೆಯ ಸಮಯದಲ್ಲಿ ಆರೋಪಿತನ ಮನೆಯ ಹತ್ತಿರ ರಸ್ತೆಯ ಮೇಲೆ ಚಾಸಾ-2 ಮತ್ತು ಆರೋಪಿತನ ನಡುವೆ ಗಲಾಟೆ ನಡೆದಿತ್ತು

CW-04
PW-03

4. ಆಗ ಆರೋಪಿತನು ಚಾಸಾ-2 ಇವರಿಗೆ ಬಡಿಗೆಯಿಂದ ಮತ್ತು ಕೈಯಿಂದ ಹೊಡೆದಿರುತ್ತಾನೆ.

5. ಆಗ ಆರೋಪಿತನು ಚಾಸಾ-2 ಈತನಿಗೆ ಬ್ಯಾಡರ ಸೂಳೆಮನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ.

6. ಆ ಸಮಯದಲ್ಲಿ ನಾನು ಮತ್ತು ಚಾಸಾ-5 ಜಗಳವನ್ನು ನೋಡಿ ಬಿಡಿಸಿಕೊಂಡಿರುತ್ತೇವೆ.

7. ಚಾಸಾ-1 ಇವಳು ಹೊಲದಿಂದ ಮರಳಿ ಬರುವ ಸಮಯದಲ್ಲಿ ಆರೋತಪಿನು ತನ್ನೊಂದಿಗೆ ಮಾತನಾಡಲು ಫೋನ್ ನಂಬರ್ ಕೊಡಲು ಪ್ರಯತ್ನಿಸಿದಾಗ ಸದರಿಯವಳು ಅದನ್ನು ತಿರಸ್ಕರಿಸಿದ್ದರಂದ ಆರೋಪಿತನು ಅವಳೊಂದಿಗೆ ದುರ್ನಡತೆಯಿಂದ ನಡೆದು ಕೊಂಡಿರುವುದಾಗಿ ವಿಚಾರವಾಗಿ ಸದರಿ ಜಗಳ ನಡೆದಿರುತ್ತದೆ ಎಂದು ಚಾಸಾ-2 ಈತನು ನನಗೆ ತಿಳಿಸಿರುತ್ತಾನೆ.

8. ಆ ದಿನ ಆರೋಪಿತನು ಹರಿದ ಚಾಸಾ-2 ಈತನ ಅಂಗಿಯನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಿದ್ದು ಇರುತ್ತದೆ.

**ಪಾಟೀ ಸವಾಲಃ ಶ್ರಿ ಜೆ.ಸಿ.ಪಿ. ವಕೀಲರಿಂದ ಆರೋಪಿ ಪರವಾಗಿಃ**

**(ಕೂಗಿಸಲಾಯಿತು, ಗೈರು ಹಾಜರಿರುತ್ತಾರೆ. ಮಾನ್ಯ ಸರ್ವೋಚ್ಛ ನ್ಯಾಯಾಲಯಾವು ವಿನೋದ್ ಕುಮಾರ v/s ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಪಾಟೀ ಸವಾಲನ್ನು ಮುಖ್ಯ ವಿಚಾರಣೆ ಮುಗಿದ ತಕ್ಷಣವೇ ಮಾಡಿ ಮುಗಿಸಬೇಕೆಂದು ಹೇಳಿರುವುದರಿಂದ, ಸಮಯಾವಕಾಶ ಕೊಡಲು**

CW-04
PW-03

**ಯಾವುದೇ ಸಕಾರಣ ಇರದೇ ಇರುವುದರಿಂದ ಅವರ ಮನವಿಯನ್ನು ನಿರಾಕಾರಿಸಿ ಪಾಟೀ ಸವಾಲನ್ನು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.